ಇ) ಬೆಳಗಾಂ ಜಿಲ್ಲೆಗೆ ಕರ್ನಾಟಕ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದಿಂದ ನಿಗದಿಪಡಿಸಿದ ಗುರಿಗೆ ತಕ್ಕಂತೆ ಹಣ ಬಿಡುಗಡೆ ಮಾಡಿದ್ದು ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ.

	ತಾಲ್ಲೂಕು		
1)	ಅಥಣಿ	20.58	
2)	ರಾಯಭಾಗ್	132.28	
3)	ಚಿಕ್ಕೋಡಿ	38.69	
4)	ಹುಕ್ಕೇರಿ	11.73	
5)	ಬೆಳಗಾಂ	56.18	
6)	ಖಾನಾಪುರ	1.97	
7)	ಗೋಕಾಕ್	28.84	
8)	ಬೈಲಹೊಂಗಲ	27.70	
9)	ಸವದತ್ತಿ	46.47	
10)	ರಾಮದುರ್ಗ	22.54	
	ಒಟ್ಟು	ರೂ.386.98	ಲಕ್ಷಗಳು

ರಾಜ್ಯದಲ್ಲಿ ನಗರ ಯೋಜನೆ ಇಲಾಖೆಯ ಕಾರ್ಯಗಳು.

2007(2630)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ(ಅಂಕೋಲ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಲ್ಲೆಲ್ಲಿ ನಗರ ಯೋಜನೆ ಇಲಾಖೆ ಇದೆ?

ಆ) ನಗರ ಯೋಜನಾ ಇಲಾಖೆಯ ಕಾರ್ಯವೇನು ಅದರ ಪೂರ್ಣ ನಿಯಮಗಳೇನು? (ವಿವರ ಒದಗಿಸುವುದು)

ಇ) ಹಳೇ ಕಟ್ಟಡ ದುರಸ್ತಿಗೆ ನಗರ ಯೋಜನಾ ಇಲಾಖೆಯಿಂದ ಅನುಮತಿ ಪಡೆಯಬೇಕೆ?

ಈ) ಗ್ರಾಮೀಣ ಪ್ರದೇಶದವರು ಇವರಿಂದ ಅನುಮತಿ ಪಡೆಯಬೇಕೆ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು):

ಅ) ಅನುಬಂಧ-1ರಲ್ಲಿ ವಿವರಗಳನ್ನು ಒದಗಿಸಲಾಗಿದೆ.

ಆ) I) ನಗರ ಮತ್ತು ಪಟ್ಟಣಗಳಿಗೆ ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸುವುದು.

II) ಬಡಾವಣೆ ವಿಸ್ತರಣಾ ಯೋಜನೆ, ಪುನರ್‌ವಸತಿ ಯೋಜನೆ, ಅಭಿವೃದ್ಧಿ ಮತ್ತು ಸುಧಾರಣಾ ಯೋಜನೆಗಳ ತಯಾರಿಕೆ.

III) ರಾಜ್ಯ ನಗರ ಯೋಜನಾ ಮಂಡಳಿಗೆ ಮತ್ತು ಯೋಜನಾ ಪ್ರಾಧಿಕಾರಗಳಿಗೆ ಹಾಗೂ ನಗರಾಭಿವೃದ್ಧಿ ಪ್ರಾಧಿಕಾರಗಳಿಗೆ ಅಭಿವೃದ್ಧಿ ಯೋಜನೆ ತಯಾರಿಸುವಲ್ಲಿ ಮತ್ತು ಕಾರ್ಯಾನುಷ್ಠಾನ ತರುವಲ್ಲಿ ತಾಂತ್ರಿಕ ನೆರವು ಹಾಗೂ ಮಾರ್ಗದರ್ಶನ ನೀಡುವುದು.

IV) ಶಾಸನಬದ್ಧ ಸಂಸ್ಥೆಗಳಾದ ಕರ್ನಾಟಕ ಗೃಹ ಮಂಡಳಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ಮುಂತಾದವುಗಳಿಗೆ ತಾಂತ್ರಿಕ ನೆರವು ನೀಡುವುದು.

V) ಅನ್ಯಕ್ರಾಂತ ಪ್ರಕರಣಗಳಿಗೆ ಸಂಬಂಧಿಸಿದಂತೆ ಕಂದಾಯ ಇಲಾಖೆಗೆ ತಾಂತ್ರಿಕ ಅಭಿಪ್ರಾಯ ನೀಡುವುದು.

VI) ಚಲನಚಿತ್ರ ಮಂದಿರಗಳಿಗೆ ಪರವಾನಿಗೆ ನೀಡುವ ಸಂಬಂಧ ಜಿಲ್ಲಾ ದಂಡಾಧಿಕಾರಿಗಳಿಗೆ ತಾಂತ್ರಿಕ ಅಭಿಪ್ರಾಯ ನೀಡುವುದು.

VII) ಸಂಚಾರ ನಿರ್ವಹಣಾ ಯೋಜನೆಗಳ ತಯಾರಿಕೆ.

ಇ) ನಗರ ಯೋಜನಾ ಇಲಾಖೆಯಿಂದ ಅನುಮತಿ ಪಡೆಯುವ ಅವಶ್ಯಕತೆ ಇಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಅನುಬಂಧ-I

ನಗರ ಯೋಜನಾ ಇಲಾಖೆಯ ಕಛೇರಿಗಳ ಪಟ್ಟಿ

I. ಕೇಂದ್ರ ಕಛೇರಿ (ನಗರ ಯೋಜನಾ ನಿರ್ದೇಶಕರ ಕಛೇರಿ) ಬೆಂಗಳೂರು.

II. ಪ್ರಾದೇಶಿಕ ಕಛೇರಿಗಳು (ನಗರ ಯೋಜನಾ ಜಂಟಿ ನಿರ್ದೇಶಕರ ಕಛೇರಿಗಳು)

1) ಗುಲ್ಬರ್ಗಾ

2) ಮೈಸೂರು

3) ಬೆಳಗಾಂ

III. ಶಾಖಾ ಕಛೇರಿಗಳು (ನಗರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿಗಳು)

1) ಗುಲ್ಬರ್ಗಾ

2) ಯಾದಗೀರ್

3) ರಾಯಚೂರು

4) ಕೊಪ್ಪಳ

5) ಬಳ್ಳಾರಿ

6) ಬೀದರ್

7) ಮೈಸೂರು

8) ಚಾಮರಾಜನಗರ

9) ಮಂಡ್ಯ

10) ಹಾಸನ

11) ಚಿಕ್ಕಮಗಳೂರು

12) ಮಡಕೇರಿ

13) ದಕ್ಷಿಣ ಕನ್ನಡ (ಮಂಗಳೂರು)

14) ಉಡುಪಿ

15) ರಾಮನಗರ

16) ಕೋಲಾರ

17) ತುಮಕೂರು

18) ಶಿವಮೊಗ್ಗ

19) ಚಿತ್ರದುರ್ಗ

20) ದಾವಣಗೆರೆ

21) ಬೆಳಗಾಂ

22) ನಿಪ್ಪಾಣಿ

23) ಧಾರವಾಡ

24) ಗದಗ

25) ಹಾವೇರಿ

26) ಉತ್ತರ ಕನ್ನಡ ಕಾರವಾರ

27) ದಾಂಡೇಲಿ

28) ವಿಜಾಪೂರ

29) ಬಾಗಲಕೋಟೆ

30) ಜಮಖಂಡಿ